

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **29–06–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹಝ್ರತ್ ಅಮ್ಮಾರ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ವಿವರಿಸಿದ್ದೆನು. ಅವರಿಗೆ ಸಂಬಂಧಿಸಿ ಇನ್ನೂ ಕೆಲವು ವರದಿಗಳಿವೆ. ಅವುಗಳನ್ನು ನಾನು ಇಂದು ವಿವರಿಸುವೆನು. ಹಝ್ರತ್ ಹಸನ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಅಮರ್ ಬಿನ್ ಆಸ್ ರಝಿಯಲ್ಲಾಹು ಅನ್‌ಹು ಹೇಳಿದರು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವ ತನಕ ಯಾರನ್ನು ಪ್ರೀತಿಸುತ್ತಿದ್ದರೋ ಅಂತಹವರ ಬಗ್ಗೆ ನನ್ನ ಪ್ರತೀಕ್ಷೆ ಏನೆಂದರೆ ಅಂತಹ ವ್ಯಕ್ತಿಯನ್ನು ಅಲ್ಲಾಹನು ನರಕಕ್ಕೆ ಹಾಕಲಾರನು. ಹಝ್ರತ್ ಅಮರ್ ಬಿನ್ ಆಸ್ ಹೇಳಿದರು: ಅಮ್ಮಾರ್ ಬಿನ್ ಯಾಸಿರ್ ಅಂತಹ ಓರ್ವ ವ್ಯಕ್ತಿಯಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಯಾವಾಗಲೂ ಪ್ರೀತಿಸುತ್ತಿದ್ದರು. ನಾನು ಇಬ್ಬರ ಬಗ್ಗೆ ಸಾಕ್ಷಿ ಆಗಿದ್ದೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾಗುವ ತನಕ ಅವರಿಬ್ಬರನ್ನು ಪ್ರೀತಿಸುತ್ತಿದ್ದರು. ಅವರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಮತ್ತು ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಆಗಿದ್ದಾರೆ.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹಝ್ರತ್ ಅಮ್ಮಾರ್ ಬಗ್ಗೆ ಹೇಳಿದರು: ಅವರು ತನ್ನ ಹಿಂಗಾಲಿನಿಂದ ತನ್ನ ತಲೆಯ ತುದಿಯ ತನಕ ಈಮಾನ್‌ನಿಂದ ತುಂಬಿದ್ದರು. ಹಝ್ರತ್ ಖಬ್ಬಾಬ್, ಹಝ್ರತ್ ಉಮರ್‌ರವರನ್ನು ಕಾಣಲು ಹೋದಾಗ ಹಝ್ರತ್ ಉಮರ್ ಹೇಳಿದರು: ನೀವು ಸಮೀಪಕ್ಕೆ ಬನ್ನಿರಿ. ಈ ಸಭೆಯಲ್ಲಿರುವವರಲ್ಲಿ ನಿಮಗಿಂತ ಹೆಚ್ಚು ಅರ್ಹತೆವುಳ್ಳವರು ಅಮ್ಮಾರ್‌ರ ಹೊರತು ಬೇರೆ ಯಾರೂ ಇಲ್ಲ. ಅನಂತರ ಹಝ್ರತ್ ಖಬ್ಬಾಬ್ ತನ್ನ ಸೊಂಟಕ್ಕೆ ಸಂಭವಿಸಿದ ಗಾಯಗಳ ಕಲೆಗಳನ್ನು ಹಝ್ರತ್ ಉಮರ್‌ರಿಗೆ ತೋರಿಸಿದರು. ಅವುಗಳು ಮಕ್ಕದ ಬಹುದೇವಾರಾಧಕರಿಂದ ಉಂಟಾದವುಗಳಾಗಿದ್ದುವು. ಹಝ್ರತ್ ಉಮರ್ ಅವರಿಗೆ ಬಹಳ ಗೌರವ ನೀಡುತ್ತಿದ್ದರು. ಏಕೆಂದರೆ ಅವರು ಆರಂಭದ ಕಾಲದಲ್ಲಿ ಬಹಳ ಕಷ್ಟ ಅನುಭವಿಸಿದ್ದರು. ಹಝ್ರತ್ ಉಮರ್ ಹಝ್ರತ್ ಅಮ್ಮಾರ್ ಬಗ್ಗೆ ಸಹ ಹೇಳಿದರು, ಅವರು ಸಹ ಬಹಳ ಕಷ್ಟ ಅನುಭವಿಸಿದ್ದರೆಂದು.

ಅಬೂ ಮಜ್‌ಲಿಸ್ ಹೇಳುತ್ತಾರೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಒಮ್ಮೆ ಬಹಳ ಹೃಸ್ವವಾಗಿ ನಮಾಝ್ ಮಾಡಿದರು. ಒಬ್ಬರು ಅವರನ್ನು ಅದರ ಬಗ್ಗೆ ಕೇಳಿದಾಗ ಅವರು ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರ್ವಹಿಸುತ್ತಿದ್ದ ನಮಾಝ್‌ನಿಂದ ನಾನು ಒಂದು ತಲೆಗೂದಲಿನಷ್ಟು ಸಹ ವ್ಯತ್ಯಾಸ ಮಾಡಿಲ್ಲ. ಇದೇ ವಿಷಯಕ್ಕೆ ಸಂಬಂಧಿಸಿ ಇನ್ನೊಂದು ವರದಿ ಹೀಗಿದೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ನಮ್ಮ ನಮಾಝ್‌ಗೆ ನೇತೃತ್ವ ವಹಿಸಿ ಅಲ್ಪ ಸಮಯದೊಳಗೆ ಮುಕ್ತಾಯಗೊಳಿಸಿದರು. ಜನರಿಗೆ ಆಶ್ಚರ್ಯವಾಯಿತು. ಹಝ್ರತ್ ಅಮ್ಮಾರ್ ಕೇಳಿದರು ನಾನು ರುಕೂ ಮತ್ತು ಸುಜೂದ್ ಮಾಡಿಲ್ಲವೇ. ಜನರು ಹೇಳಿದರು: ಮಾಡಿರುವಿರಿ. ಹಝ್ರತ್ ಅಮ್ಮಾರ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೇಡುತ್ತಿದ್ದ ಒಂದು ದುಆ ನಾನು ಬೇಡಿಕೊಂಡೆನು. ಅದು ಹೀಗೆ: ಓ ಅಲ್ಲಾಹ್, ಅದೃಶ್ಯ ಸಮಾಚಾರಗಳ ಅರಿವು ನಿನಗೆ ಮಾತ್ರ ಇದೆ. ಎಲ್ಲ ಸೃಷ್ಟಿಗಳ ಮೇಲೆ ನಿನ್ನ ಅಧಿಕಾರವೇ ಆವರಿಸಿದೆ. ನಿನ್ನ ಜ್ಞಾನ ಪ್ರಕಾರ ನಾನು ಜೀವಿಸಿರುವುದು ನನಗೆ ಉಪಯುಕ್ತವಾಗಿರುವ ತನಕ ನನ್ನನ್ನು ಜೀವಂತವಾಗಿರಿಸು. ನನಗೆ ಮೃತ್ಯುವು ಉತ್ತಮವಾಗಿರುವಾಗ ನನ್ನನ್ನು ಮೃತಪಡಿಸು. ಓ ಅಲ್ಲಾಹ್, ನಾನು ಅದೃಶ್ಯ ಕಾಲದಲ್ಲೂ ಪ್ರತ್ಯಕ್ಷದಲ್ಲೂ ನಿನ್ನಿಂದ ನಿನ್ನ ಬಗ್ಗೆ ಭಯಭಕ್ತಿಯನ್ನು ಬೇಡಿಕೊಳ್ಳುತ್ತೇನೆ. ಸಿಟ್ಟಿನ ಮತ್ತು ಸಂತೋಷದ ಕಾಲದಲ್ಲೂ ಸತ್ಯವನ್ನು ಹೇಳುವ ಶಕ್ತಿಯನ್ನು ಬೇಡಿಕೊಳ್ಳುತ್ತೇನೆ. ಸಂಕುಚಿತ ಸಾಂಪತ್ತಿಕ ಸ್ಥಿತಿಯಲ್ಲೂ ಸಮೃದ್ಧಿಯಲ್ಲೂ ಮಧ್ಯಮ ಮಾರ್ಗವನ್ನು ಅನುಸರಿಸುವಂತಾಗಲು ಬೇಡಿಕೊಳ್ಳುತ್ತೇನೆ. ನಿನ್ನ ಚಹರೆಯಲ್ಲಿ ರಸಾನುಭೂತಿಯ ದೃಶ್ಯ ಕಾಣಲು ನಿನ್ನ ದರ್ಶನದ ಅಭಿಲಾಷೆ ನನ್ನಲ್ಲಿ ತಲೆದೋರುವಂತಾಗಲಿ ಎಂದು ಬೇಡಿಕೊಳ್ಳುತ್ತೇನೆ. ಯಾವುದಾದರೂ ಕಷ್ಟದಾಯಕ ಕೃತ್ಯ ಮತ್ತು ಪಥಭ್ರಷ್ಟತೆ ಉಂಟುಮಾಡುವ ಪಿತೂರಿಯಿಂದ ನಿನ್ನ ಅಭಯ ಯಾಚಿಸುತ್ತೇನೆ. ಓ ಅಲ್ಲಾಹ್, ನಮ್ಮನ್ನು ಸತ್ಯ ವಿಶ್ವಾಸದ ಸೌಂದರ್ಯದ ಮೂಲಕ ಅಲಂಕರಿಸು. ನಮ್ಮನ್ನು ಮಾರ್ಗದರ್ಶನ ಪಡೆಯುವವರ ಮಾರ್ಗದರ್ಶಕರನ್ನಾಗಿ ಮಾಡು.

ಅಬೂ ನೌಫಲ್ ಬಿನ್ ಅಬೀ ಅಖ್‌ರಬ್ ಹೇಳುತ್ತಾರೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಎಲ್ಲರಿಗಿಂತಲೂ ಹೆಚ್ಚು ಮೌನವಾಗಿರುವವರಾಗಿದ್ದರು. ಅವರು ಎಲ್ಲರಿಗಿಂತ ಕಡಿಮೆ ಮಾತನಾಡುವವರಾಗಿದ್ದರು. ಅವರು ಹೇಳುತ್ತಿದ್ದರು– ನಾನು ಫಿತ್ನದಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ. ನಾನು ಫಿತ್ನದಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ. ಖೈಸಮ ಬಿನ್ ಅಬೀ ಸಬ್ರ ಹೇಳುತ್ತಾರೆ: ನಾನು ಮದೀನಕ್ಕೆ ಆಗಮಿಸಿದಾಗ ಪ್ರಾರ್ಥಿಸಿದೆ ಒಬ್ಬ ಸಾತ್ವಿಕನಾದ ವ್ಯಕ್ತಿಯ ಸಹವಾಸ ಲಭಿಸಲಿ ಎಂದು. ಹಝ್ರತ್ ಅಬೂ ಹುರೈರರವರೊಂದಿಗೆ ಸಹವಾಸ ಮಾಡುವ ಭಾಗ್ಯವನ್ನು ಅಲ್ಲಾಹನು ನನಗೆ ನೀಡಿದನು. ಅಬು ಹುರೈರ ನನ್ನೊಂದಿಗೆ

ಕೇಳಿದರು: ನೀವು ಎಲ್ಲಿಯವರು ಎಂದು. ನಾನು ಹೇಳಿದೆ: ನಾನು ಕೂಫದವನೆಂದು. ನಾನು ಜ್ಞಾನವನ್ನು ಮತ್ತು ಒಳಿತನ್ನು ಗಳಿಸಲು ಬಂದಿದ್ದೇನೆ ಎಂದು ಹೇಳಿದೆ. ಆಗ ಅಬೂ ಹುರೈರ ಹೇಳಿದರು: ನಿಮ್ಮ ಊರಲ್ಲಿ ಪ್ರಾರ್ಥನೆಗಳಿಗೆ ಉತ್ತರ ಲಭಿಸುತ್ತಿರುವ ಹಝ್ರತ್ ಸಅದ್ ಬಿನ್ ಅಬೀ ವಖಾಸ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ನೀರು ಮತ್ತು ಪಾದರಕ್ಷೆಗಳನ್ನು ಎತ್ತಿಕೊಂಡು ತರುವ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ರಹಸ್ಯಗಳಲ್ಲಿ ಸಹ ಭಾಗಿಯಾಗಿರುವ ಹಝ್ರತ್ ಹುಝೈಫ ಬಿನ್ ಯಮಾನ್ ಮತ್ತು ಹಝ್ರತ್ ಅಮ್ಮಾರ್ ಬಿನ್ ಯಾಸಿರ್ – ಅವರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು ಅಲ್ಲಾಹನು ಅವರಿಗೆ ಶೈತಾನನಿಂದ ಅಭಯ ನೀಡಿರುವನೆಂದು, ಮತ್ತು ಇಂಜೀಲ್ ಹಾಗೂ ಪವಿತ್ರ ಖುರ್‌ಆನ್ ಬಗ್ಗೆ ಜ್ಞಾನ ಗಳಿಸಿರುವ ಹಝ್ರತ್ ಸಲ್ಮಾನ್ ನಿಮ್ಮ ಊರಿನಲ್ಲಿ ಇಲ್ಲವೇ? ಅಂತಹ ಜನರಿಂದ ನೀವು ಏಕೆ ಲಾಭ ಪಡೆಯಲಿಲ್ಲ?

ಮುಹಮ್ಮದ್ ಬಿನ್ ಅಲಿ ಬಿನ್ ಹನಫಿಯ ಹೇಳುತ್ತಾರೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗ ಬಾಧಿತರಾಗಿದ್ದಾಗ ಅವರನ್ನು ಭೇಟಿಯಾದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಅಮ್ಮಾರ್‌ರೊಂದಿಗೆ ಹೇಳಿದರು: ನನ್ನ ಮೇಲೆ ಜಿಬ್ರೀಲ್ ಉಚ್ಚರಿಸಿ ಊದಿದ ವಚನಗಳನ್ನು ನಿಮಗೆ ಹೇಳಿಕೊಡಲೇ? ಆಗ ಹಝ್ರತ್ ಅಮ್ಮಾರ್, ಹೇಳಿ ಕೊಡಿರಿ ಎಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉಚ್ಚರಿಸಿ ಊದುವ ಈ ವಾಕ್ಯಗಳನ್ನು ಕಲಿಸಿಕೊಟ್ಟರು. **ಬಿಸ್ಮಿಲ್ಲಾಹಿ ಅರ್‌ಖೀಕ, ವಲ್ಲಾಹು ಯಶ್‌ಫೀಕ ಮಿನ್ ಕುಲ್ಲಿ ದಾಯಿನ್ ಯೂಝೀಕ.** (ಅಲ್ಲಾಹನ ನಾಮದೊಂದಿಗೆ ನಿನ್ನ ಮೇಲೆ ಊದುತ್ತೇನೆ. ನಿನಗೆ ಕಷ್ಟ ನೀಡುತ್ತಿರುವ ಪ್ರತಿಯೊಂದು ರೋಗ ಬಾಧೆಯಿಂದ ಅಲ್ಲಾಹನು ನಿನಗೆ ಉಪಶಮನ ನೀಡಲಿ.) ನೀನು ಇದನ್ನು ಅವಲಂಭಿಸಿ ಸುಖ ಪಡೆಯಬಹುದು ಎಂದು ಹೇಳಿದರು.

ಹಝ್ರತ್ ಅನಸ್ ವರದಿ ಮಾಡುತ್ತಾರೆ: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸ್ವರ್ಗವು ಹಝ್ರತ್ ಅಲೀ, ಹಝ್ರತ್ ಅಮ್ಮಾರ್, ಹಝ್ರತ್ ಸಲ್ಮಾನ್ ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ತಅಲಾ ಅನ್‌ಹುಂ ರವರ ಹಕ್ಕಾಗಿದೆ. ಹಝ್ರತ್ ಹುದೈಫ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಕುಳಿತಿದ್ದೆವು. ಆಗ ಅವರು ಹೇಳಿದರು: ನಾನು ನಿಮ್ಮ ಜೊತೆ ಎಷ್ಟುಕಾಲ ಜೀವಿಸಿರುವೆನು ಎಂದು ನನಗೆ ತಿಳಿದಿಲ್ಲ. ನನ್ನ ನಂತರ ನೀವು ಈ ಜನರನ್ನು ಅನುಸರಿಸಬೇಕು ಎಂದು ಅಬೂಬಕರ್ ಮತ್ತು ಉಮರ್ ಕಡೆಗೆ ಸೂಚಿಸಿ ಹೇಳಿದರು. ಅನಂತರ ಹೇಳಿದರು: ಅಮ್ಮಾರ್ ವರ್ತಿಸುವ ರೀತಿಯನ್ನು ಅನುಕರಿಸಬೇಕು. ಇಬ್ನು ಮಸ್‌ಊದ್ ನಿಮಗೆ ಹೇಳಿ ಕೊಡುವುದನ್ನು ಅಂಗೀಕರಿಸಬೇಕು.

ಹಝ್ರತ್ ಉಸ್ಮಾನ್ ವಿರುದ್ಧ ಮತ್ತು ಖಿಲಾಫತ್ ವಿರುದ್ಧ ಗಲಭೆ ಗೊಂದಲಗಳು ತಲೆದೋರಿದುದರ ಕಾರಣವೇನೆಂದರೆ, ಹಾಗೆ ಮಾಡಿದವರು ಸರಿಯಾದ ರೀತಿಯಲ್ಲಿ ತರಬೇತಿ ಗಳಿಸಿರಲಿಲ್ಲ. ಅವರು ಕೇಂದ್ರ ಸ್ಥಳಕ್ಕೆ ಬಹಳ ಕಡಿಮೆ ಸಂದರ್ಶನ ನೀಡುವವರಾಗಿದ್ದರು. ಅವರಿಗೆ ಪವಿತ್ರ ಖುರ್‌ಆನ್ ಮತ್ತು ಧರ್ಮದ ಬಗ್ಗೆ ಜ್ಞಾನ ಬಹಳ ಕಡಿಮೆ ಇತ್ತು. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಜಮಾಅತಿನವರು ಆ ಘಟನೆಗಳಿಂದ ಪಾಠ ಕಲಿತುಕೊಳ್ಳಬೇಕು ಎಂದು ಉಪದೇಶಿಸುತ್ತಿದ್ದರು. ಆದುದರಿಂದ ಪವಿತ್ರ ಖುರ್‌ಆನ್ ಕಲಿತುಕೊಳ್ಳಬೇಕು. ಕೇಂದ್ರದೊಂದಿಗೆ ಯಾವಾಗಲೂ ಸಂಪರ್ಕ ಇರಿಸಿಕೊಳ್ಳಬೇಕು. ಧರ್ಮದ ಬಗ್ಗೆ ಕಲಿಯಬೇಕು. ಆ ಮೂಲಕ ಜಮಾಅತಿನಲ್ಲಿ ಸಂಭವಿಸಬಹುದಾದ ಪಿತೂರಿಯಿಂದ ರಕ್ಷಣೆ ಪಡೆಯಬಹುದು.

ನಮಗೆ ಅಲ್ಲಾಹನು ಈ ಕಾಲದಲ್ಲಿ ಎಂ.ಟಿ.ಎ. ಮೂಲಕ ಧಾರ್ಮಿಕ ಜ್ಞಾನ ಗಳಿಸುವ ಮಾರ್ಗ ಒದಗಿಸಿದ್ದಾನೆ. ಅದರಲ್ಲಿ ಪವಿತ್ರ ಖುರ್‌ಆನಿನ ದರ್ಸ್ ಮತ್ತು ಹದೀಸಿನ ದರ್ಸ್ ನೀಡಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ದರ್ಸ್ ನೀಡಲಾಗುತ್ತಿದೆ. ಖುತ್‌ಬಗಳು ಸಹ ಪ್ರಸಾರವಾಗುತ್ತಿವೆ. ಅದರ ಮೂಲಕ ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿತವಾಗುತ್ತದೆ. ಬೇರೆ ಭಾಷಣಗಳೂ ಜಲ್ಸಗಳ ಕಾರ್ಯಕ್ರಮಗಳೂ ಪ್ರಸಾರವಾಗುತ್ತಿವೆ. ನಾವು ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಎಂ.ಟಿ.ಎ.ದೊಂದಿಗೆ ಜೋಡಿಸುವುದಾದರೆ ಅದು ತರಬೇತಿಗೆ ಬಹಳ ಉತ್ತಮ ಮಾರ್ಗವಾಗುತ್ತದೆ. ಅದು ಎಲ್ಲಾ ಪಿತೂರಿಗಳಿಂದ ರಕ್ಷಣೆ ಪಡೆಯಲು ಮಾರ್ಗವೂ ಆಗಿದೆ. ಧಾರ್ಮಿಕ ಜ್ಞಾನ ವರ್ಧಿಸುವಂತಹದೂ ಆಗಿದೆ. ಆದುದರಿಂದ ನಾವು ಎಂ.ಟಿ.ಎ. ಬಗ್ಗೆ ಹೆಚ್ಚಿನ ಶ್ರದ್ಧೆ ನೀಡಬೇಕಾಗಿದೆ. ಅಲ್ಲಾಹನು ನಮಗೆ ದಯಪಾಲಿಸಿದ ಎಂ.ಟಿ.ಎ.ದೊಂದಿಗೆ ನಾವು ನಮ್ಮನ್ನು ಜೋಡಿಸಿಕೊಳ್ಳಬೇಕು.

(ಹುಝೂರ್ ಒಬ್ಬ ಸಹಾಬಿ ಹಝ್ರತ್ ಅಬೂ ಲಬಾಬ ಬಿನ್ ಅಬ್ದುಲ್ ಮುಂಝಿರ್ ಬಗ್ಗೆ ವಿವರಿಸಿದರು ಹುಝೂರ್ ಹೇಳಿದರು:) ಅವರು ಅನ್‌ಸಾರ್ ಗೋತ್ರದವರಾಗಿದ್ದರು. ಅವರು ಆ ಗೋತ್ರದ ಹನ್ನೆರಡು ಹಿರಿಯರಲ್ಲಿ ಒಬ್ಬರಾಗಿದ್ದರು. ಅವರು ಅಖಬದ ಬೈಅತ್‌ನಲ್ಲಿ ಸೇರಿದ್ದರು. ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಅನುಪಸ್ಥಿತಿಯಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಉಮ್ಮು ಮಕ್ತೂಮ್‌ರನ್ನು ಮದೀನದ ಅಮೀರ್ ಆಗಿ ನೇಮಿಸಿದ್ದರು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಅಂದಾಜು 36 ಮೈಲು ದೂರವಿರುವ ರೌಹ ಎಂಬಲ್ಲಿಗೆ ತಲಪಿದಾಗ ಪ್ರಾಯಶಃ ಯೋಚಿಸಿದರು, ಅಬ್ದುಲ್ಲಾರವರು ಅಂಧರಾಗಿರುವ ಕಾರಣ, ಖುರೈಶಿ ಸೈನ್ಯದ ಆಕ್ರಮಣ ಸಾಧ್ಯತೆ ಇರುವಾಗ ಮದೀನದ ಭದ್ರತೆಯ ದೃಷ್ಟಿಯಿಂದ ಹಝ್ರತ್ ಅಬೂ ಲಬಾಬ ಬಿನ್ ಮುಂಝಿರ್‌ರನ್ನು ವಾಪಸು ಕಳುಹಿಸಿ ಮದೀನದ ಅಮೀರರಾಗಿ ನಿಶ್ಚಯಿಸುವುದು ಉತ್ತಮವೆಂದು ಭಾವಿಸಿದರು. ಹಝ್ರತ್

ಅಬ್ದುಲ್ಲಾ ಬರೇ ಇಮಾಮುಸ್ಸಲಾತ್ ಕೆಲಸ ನಿರ್ವಹಿಸಬೇಕೆಂದೂ ಆಡಳಿತೆ ವ್ಯವಸ್ಥೆ ಅಬೂ ಲಬಾಬರ ಕೈಯ್ಯಲ್ಲಿರುವುದೆಂದೂ ಆಜ್ಞಾಪಿಸಿದರು. ಇಬ್ನು ಇಸ್‌ಹಾಖ್ ಹೇಳುತ್ತಾರೆ ಗನೀಮತ್ ಸಂಪತ್ತಿನಿಂದ ಅವರಿಗೆ ಸಹ ಪಾಲು ನೀಡಲಾಗಿತ್ತು ಎಂದು.

ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಹಝ್ರತ್ ಅಲಿ ಮತ್ತು ಹಝ್ರತ್ ಅಬೂ ಲಬಾಬ ಈ ಮೂವರು ಸರದಿ ಪ್ರಕಾರ ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದರು. ಹಝ್ರತ್ ಅಲಿ ಮತ್ತು ಹಝ್ರತ್ ಅಬೂ ಲಬಾಬ ನಾವು ನಡೆದುಕೊಂಡು ಹೋಗುವೆವು ತಾವೇ ಒಂಟೆ ಸವಾರಿ ಮಾಡಿರಿ ಎಂದಾಗ ಅವರು ಒಪ್ಪದೆ ಹೇಳಿದರು: ನೀವಿಬ್ಬರು ನಡೆಯುವುದರಲ್ಲಿ ನನಗಿಂತ ಶಕ್ತಿಶಾಲಿಗಳಲ್ಲ. ಅಲ್ಲದೆ ಪುಣ್ಯ ಗಳಿಸುವ ಬಗ್ಗೆ ನಾನು ನಿಮಗಿಂತ ಅವಶ್ಯಕತೆ ಇಲ್ಲದವನೂ ಅಲ್ಲ. ಬದರ್ ಯುದ್ಧದಲ್ಲಿ ಜಯಗಳಿಸಿದ ನಂತರ ಹಝ್ರತ್ ಝೈದ್ ಬಿನ್ ಹಾರಿಸರನ್ನು ಮದೀನದವರಿಗೆ ಶುಭವಾರ್ತೆ ನೀಡಲು ಕಳುಹಿಸಲಾಗಿತ್ತು. ಹಝ್ರತ್ ಝೈದ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂಟೆಯೇರಿ ಬಂದು ಉಚ್ಚ ಧ್ವನಿಯಲ್ಲಿ ಘೋಷಿಸಿದರು: ರಬೀಅನ ಇಬ್ಬರು ಪುತ್ರರು ಉತ್‌ಬ ಮತ್ತು ಶೈಬ, ಹಜ್ಜಾಜ್ ಪುತ್ರರಾದ ಅಬೂ ಜಹಲ್ ಮತ್ತು ಅಬುಲ್ ಬಖ್‌ತರಿ, ಝುಮಅ ಬಿನ್ ಅಲ್ ಅಸ್‌ವದ್, ಉಮಯ್ಯಾ ಬಿನ್ ಖಲ್‌ಫ್ ಇವರೆಲ್ಲರೂ ಕೊಲ್ಲಲ್ಪಟ್ಟರು! ಸುಹೈಲ್ ಬಿನ್ ಅಮ್ರ್ ಸಮೇತ ಅನೇಕರನ್ನು ಬಂಧಿಸಲಾಗಿದೆ ಎಂದು ಉಚ್ಛಸ್ವರದಲ್ಲಿ ಹೇಳಿದರು. ಆದರೆ ಜನರು ಝೈದ್ ಬಿನ್ ಹಾರಿಸ್‌ರ ಮಾತುಗಳನ್ನು ನಂಬಲಿಲ್ಲ. ಝೈದ್ ಸೋತು ಓಡಿ ಬಂದಿದ್ದಾರೆಂದು ಅವರು ಹೇಳಿದರು. ಒಬ್ಬ ವ್ಯಕ್ತಿ ಹಝ್ರತ್ ಅಬೂ ಲಬಾಬರೊಂದಿಗೆ ಹೇಳಿದನು: ನಿಮ್ಮ ಈ ಸಂಗಡಿಗರು ಚದುರಿ ಹೋಗಿರುವರು. ಅವರು ಇನ್ನು ಒಟ್ಟಿಗೆ ಜಮಾಯಿಸಲಾರರು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಂಗಡಿಗರು ಶಹೀದರಾಗಿರುವರು. ಇದು ಅವರ ಒಂಟೆಯಾಗಿದೆ. ಅದನ್ನು ನಾವು ಗುರುತಿಸಿರುವೆವು. ಹಝ್ರತ್ ಅಬೂ ಲಬಾಬ ಹೇಳಿದರು. ಅಲ್ಲಾಹನು ನಿಮ್ಮ ಮಾತನ್ನು ಸುಳ್ಳೆಂದು ಸಾಬೀತುಗೊಳಿಸುವನು. ಯಹೂದಿಯರು ಸಹ ಹೇಳುತ್ತಿದ್ದರು, ಝೈದ್ ಸೋತು ನಿರಾಶೆಗೊಂಡು ಹಿಂದಿರುಗಿದ್ದಾರೆಂದು. ಹಝ್ರತ್ ಉಸಾಮ ಬಿನ್ ಝೈದ್ ಹೇಳುತ್ತಾರೆ: ನಾನು ನನ್ನ ತಂದೆಯವರೊಂದಿಗೆ ಪ್ರತ್ಯೇಕವಾಗಿ ಕೇಳಿದೆ, ನೀವು ಹೇಳುವುದು ಸತ್ಯವೇ ಎಂದು. ಹಝ್ರತ್ ಝೈದ್ ಹೇಳಿದರು: ಮಗನೇ, ಅಲ್ಲಾಹನಾಣೆ ನಾನು ಹೇಳುವುದು ಸತ್ಯವಾಗಿದೆ. ಹಝ್ರತ್ ಉಸಾಮ ಹೇಳುತ್ತಾರೆ: ಆಗ ನನ್ನ ಹೃದಯ ದೃಢವಾಯಿತು.

ಹಝ್ರತ್ ಅಬೂ ಲಬಾಬರ ಸರಳತೆ ಮತ್ತು ನಿಷ್ಠೆಯ ಬಗ್ಗೆ ಒಂದು ಘಟನೆ ಹೀಗಿದೆ: ಹಿಜರಿ ಐದನೆ ವರ್ಷ ಖಂದಖ್ ಯುದ್ಧದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿದಾಗ ಅವರಿಗೆ ದಿವ್ಯದರ್ಶನ ಮೂಲಕ ಅಲ್ಲಾಹನು ತಿಳಿಸಿದನು: ಬನೂ ಖುರೈಝ ಗೋತ್ರದವರ ವಿದ್ರೋಹಾತ್ಮಕ ವರ್ತನೆ ಬಗ್ಗೆ ತೀರ್ಮಾನವಾಗುವ ತನಕ ನೀವು ಆಯುಧಗಳನ್ನು ಕೆಳಗಿರಿಸಬಾರದು ಎಂದು. ಅವರು ಸಹಾಬರೊಂದಿಗೆ ಬನೂ ಖುರೈಝರ ಕೋಟೆಯ ಕಡೆಗೆ ಹೋಗಲು ಮತ್ತು ಅಸರ್ ನಮಾಝ್ ಅಲ್ಲಿ ತಲಪಿದ ನಂತರ ನಿರ್ವಹಿಸಲು ಹೇಳಿದರು. ಪ್ರಾರಂಭದಲ್ಲಿ ಯಹೂದಿಯರು ಬಹಳ ಅಹಂಭಾವ ಪ್ರಕಟಿಸುತ್ತಿದ್ದರು. ಆದರೆ ಅನಂತರ ಸಮಯ ಕಳೆದಂತೆ ಅವರು ತಮ್ಮ ಬಲಹೀನತೆ ಬಗ್ಗೆ ತಿಳಿದುಕೊಂಡರು. ಅವರು ತಮ್ಮೊಳಗೆ ಸಮಾಲೋಚನೆ ನಡೆಸಿ ಹೀಗೆ ತೀರ್ಮಾನಿಸಿದರು. ತಮ್ಮ ಪ್ರಭಾವಕ್ಕೆ ಒಳಗಾಗಬಲ್ಲ ಯಾರಾದರೊಬ್ಬ ಮುಗ್ಧ ಮುಸ್ಲಿಮನನ್ನು ಕೋಟೆಯೊಳಗೆ ಕರೆದು ತಂದು ಅವರಿಂದ ತಮ್ಮ ಬಗ್ಗೆ ಮುಹಮ್ಮದರ ತೀರ್ಮಾನ ಏನೆಂದು ತಿಳಿಯಲು ಬಯಸಿದರು. ಹಾಗೆ ಅವರು ಒಬ್ಬ ಪ್ರತಿನಿಧಿಯನ್ನು ಕಳುಹಿಸಿ ಅಬೂ ಲಬಾಬ ಬಿನ್ ಮುಂಝಿರ್ ಅನ್‌ಸಾರಿಯನ್ನು ಸಮಾಲೋಚನೆಗಾಗಿ ತಮ್ಮ ಕೋಟೆಗೆ ಕಳುಹಿಸಲು ಅಪೇಕ್ಷಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಲಬಾಬರಿಗೆ ಕೋಟೆಯೊಳಗೆ ಹೋಗಲು ಅನುಮತಿ ನೀಡಿದರು. ಬನೂ ಖುರೈಝರ ಮುಖಂಡರು ಹೀಗೆ ತೀರ್ಮಾನಿಸಿದ್ದರು. ಅಬೂ ಲಬಾಬ ಪ್ರವೇಶಿಸಿದ ಕೂಡಲೆ ಯಹೂದಿ ಮಹಿಳೆಯರೂ ಮಕ್ಕಳೂ ಅಳುತ್ತಾ ಗೋಳಾಡುತ್ತಾ ಅವರ ಸುತ್ತಲೂ ಜಮಾಯಿಸಿ ತಮ್ಮ ಕಷ್ಟವನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು ಎಂದು. ಅಬೂ ಲಬಾಬರ ಮೇಲೆ ಇದು ಪ್ರಭಾವ ಬೀರಿತು. ಬನೂ ಖುರೈಝ ಕೇಳಿದರು: ನೀವು ನಮ್ಮ ಸ್ಥಿತಿ ಹೇಗಿದೆ ಎಂದು ನೋಡುತ್ತಿರುವಿರಿ. ನಾವು ಮುಹಮ್ಮದರ ತೀರ್ಮಾನ ಪ್ರಕಾರ ನಮ್ಮ ಕೋಟೆಯಿಂದ ಹೊರಗೆ ಬರಬೇಕೆ? ಅಬೂ ಲಬಾಬ ತಕ್ಷಣ ಹೇಳಿದರು: ನೀವು ಕೋಟೆಯಿಂದ ಹೊರಗೆ ಬನ್ನಿರಿ. ಆದರೆ ಅದರೊಂದಿಗೆ ತಮ್ಮ ಕೊರಳಿಗೆ ಕೈ ಹಾಕುತ್ತಾ ಸಂಜ್ಞೆ ಮಾಡಿದರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಮ್ಮನ್ನು ಹತ್ಯೆಮಾಡಲು ಅಜ್ಞಾಪಿಸುವರು ಎಂದು.

ಹಝ್ರತ್ ಅಬೂ ಲಬಾಬ ಹೇಳುತ್ತಾರೆ: ನಾನು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ವಿಶ್ವಾಸ ವಂಚನೆ ಮಾಡಿದೆನೆಂದು ಅರಿವಾದಾಗ ನನ್ನ ಕಾಲುಗಳು ನಡುಗತೊಡಗಿದುವು. ಅವರು ಮಸ್‌ಜಿದ್ ನಬವಿಗೆ ಬಂದು ಮಸ್‌ಜಿದಿನ ಒಂದು ಸ್ತಂಭಕ್ಕೆ ತನ್ನನ್ನು ತಾನೇ ಕಟ್ಟಿಹಾಕಿ ಇದೇ ನನಗಿರುವ ಶಿಕ್ಷೆ ಎಂದರು. ಅಲ್ಲಾಹನು ನನ್ನ ತೌಬ ಅಂಗೀಕರಿಸುವ ತನಕ ನಾನು ಇದೇ ರೀತಿ ಕಟ್ಟಲ್ಪಟ್ಟ ಸ್ಥಿತಿಯಲ್ಲಿರುವೆನು. ಅಬೂ ಲಬಾಬ ಹೇಳುತ್ತಾರೆ: ನಾನು ಹದಿನೈದು ದಿನ ಇದೇ ಪರೀಕ್ಷೆಗೆ ಪಾತ್ರನಾಗಿದ್ದೆನು. ಹಝ್ರತ್ ಉಮ್ಮು ಸಲ್ಮಾ ಹೇಳುತ್ತಾರೆ: ಅಬೂ ಲಬಾಬರ ತೌಬ ಅಂಗೀಕೃತವಾದ ಸಮಾಚಾರ ನನ್ನ ಮನೆಯಲ್ಲಿ ಅವತೀರ್ಣವಾಯಿತು. ನಾನು ಸಹ್ರಿ ಸಮಯದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಗುತ್ತಾ ಕಂಡೆನು. ನಾನು ಹೇಳಿದೆ: ಅಲ್ಲಾಹನು ತಮ್ಮನ್ನು ಯಾವಾಗಲೂ ಮುಗುಳು ನಗುತ್ತಾ ಇರಿಸಲಿ. ನೀವು ನಗುತ್ತಿರುವುದೇಕೆ? ಅವರು ಹೇಳಿದರು, ಅಬೂ ಲಬಾಬರ ತೌಬ ಅಂಗೀಕೃತವಾಯಿತು. ನಾನು ಹೇಳಿದೆ: ಇದನ್ನು ನಾನು

ಅವರಿಗೆ ತಿಳಿಸಲೇ? ಅವರು ಹೇಳಿದರು: ನೀನು ತಿಳಿಸಬಹುದು. ಹಝ್ರತ್ ಉಮ್ಮು ಸಲ್ಮಾ ಹೇಳುತ್ತಾರೆ: ನಾನು ಕೋಣೆಯ ಬಾಗಿಲ ಬಳಿ ನಿಂತು ಹೇಳಿದೆ: ಅಬೂ ಲಬಾಬ ಸಂತೋಷಪಡಿರಿ. ಅಲ್ಲಾಹನು ನಿಮ್ಮ ತೌಬ ಅಂಗೀಕರಿಸಿರುವನು. ಜನರು ಅಬೂ ಲಬಾಬರ ಕಟ್ಟು ಬಿಚ್ಚಲು ಪ್ರಾರಂಭಿಸಿದಾಗ ಅವರು ಹೇಳಿದರು: ಇಲ್ಲ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ನನ್ನ ಕಟ್ಟುಬಿಚ್ಚಲಿ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಬ್ಹ್ ನಮಾಝ್‌ಗೆ ಮಸ್‌ಜಿದ್‌ಗೆ ಬಂದಾಗ ತನ್ನ ಕೈಗಳಿಂದ ಅವರ ಕಟ್ಟು ಬಿಚ್ಚಿದರು. ಅಬೂ ಲಬಾಬ ಹೇಳಿದರು: ನಾನು ಮಾಡಿದ ತಪ್ಪಿಗಾಗಿ ನಾನು ನನ್ನ ಪಿತ್ರಾರ್ಜಿತ ಮನೆ ಬಿಟ್ಟು ಬಿಡುತ್ತೇನೆ. ನನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಸದಖವಾಗಿ ನೀಡುತ್ತೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ನಿನ್ನ ಸಂಪತ್ತಿನ ಮೂರನೆಯ ಒಂದು ಭಾಗ ಮಾತ್ರ ಸದಖವಾಗಿ ಕೊಡು. ಅಬೂ ಲಬಾಬ ತನ್ನ ಸಂಪತ್ತಿನ ಮೂರನೆ ಒಂದು ಭಾಗ ಸದಖವಾಗಿ ಕೊಟ್ಟು ತನ್ನ ಪಿತ್ರಾರ್ಜಿತ ಮನೆಯನ್ನು ಬಿಟ್ಟುಕೊಟ್ಟರು.

ಅಲ್ಲಾಮ ಇಬ್ನು ಸಅದ್ ಬರೆಯುತ್ತಾರೆ: ಖೈನ್‌ಖಾಅ್ ಯುದ್ಧ ಮತ್ತು ಸವೀಖ್ ಯುದ್ಧದ ಸಂದರ್ಭದಲ್ಲಿಯೂ ಅಬೂ ಲಬಾಬರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪ್ರತಿನಿಧಿಯಾಗಿ ಮದೀನದಲ್ಲಿ ನೇಮಿಸಿದ್ದರು. ಮಕ್ಕ ವಿಜಯದ ಸಂದರ್ಭದಲ್ಲಿ ಅಬೂ ಲಬಾಬ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲೇ ಇದ್ದರು. ಅನ್‌ಸಾರ್ ಗೋತ್ರ ಅಮರ್ ಬಿನ್ ಔಫ್‌ರ ಪತಾಕೆ ಅವರ ಕೈಯಲ್ಲಿತ್ತು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ನಿಧನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರ ಅಭಿಪ್ರಾಯ ಪ್ರಕಾರ ಅಬೂ ಲಬಾಬ ಹಝ್ರತ್ ಅಲಿಯವರ ಖಿಲಾಫತ್ ಕಾಲದಲ್ಲಿ ಮೃತರಾದರು. ಕೆಲವರು ಹೇಳುತ್ತಾರೆ ಹಝ್ರತ್ ಉಸ್ಮಾನ್‌ರು ಶಹೀದರಾದ ನಂತರ ಅವರು ಮೃತರಾದರೆಂದು. ಅವರು ಹಿಜರಿ ವರ್ಷ 50ರ ತನಕ ಜೀವಿಸಿದ್ದರೆಂದು ಸಹ ಒಂದು ಅಭಿಪ್ರಾಯವಿದೆ. ಈ ಸಹಾಬರ ಪದವಿಗಳನ್ನು ಅಲ್ಲಾಹನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

ಜುಮುಅ ನಮಾಝ್ ನಂತರ ಇಬ್ಬರ ಜನಾಝ ನಮಾಝ್‌ಗಳನ್ನು ನಿರ್ವಹಿಸುವೆನು. ಒಂದು ಜನಾಝ ಹಾಝಿರ್. ಇನ್ನೊಂದು ಜನಾಝ ಗಾಯಿಬ್. ಜನಾಝ ಗಾಯಿಬ್, ಮುಕರ್ರಮ್ ಖಾಝಿ ಶಅಬಾನ್ ಅಹ್ಮದ್ ಖಾನ್ ಸಾಹಿಬ್ ಶಹೀದರದಾಗಿದೆ. ಅವರು ಸವಾಬ ಗಾರ್ಡನ್ ಲಾಹೋರಿನ ನಿವಾಸಿಯಾಗಿದ್ದರು. 2018 ಜೂನ್ 25ರಂದು ಶತ್ರುಗಳು ಅವರ ಮನೆಗೆ ನುಗ್ಗಿ ಗುಂಡು ಹಾರಿಸಿ ಶಹೀದರನ್ನಾಗಿ ಮಾಡಿದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅವರು 2001ರಲ್ಲಿ ತನ್ನ ಸ್ನೇಹಿತ ಮುಹಮ್ಮದ್ ಇಖ್‌ಬಾಲರ ಮೂಲಕ ತನ್ನ ಕುಟುಂಬ ಸಮೇತ ಬೈಅತ್ ಮಾಡಿದ್ದರು. ಅವರು ಅನೇಕ ಸದ್ಗುಣಗಳನ್ನು ಹೊಂದಿದವರಾಗಿದ್ದರು. ಬೈಅತ್‌ನ ನಂತರ ಅವರು ಬಹಳ ನಿಷ್ಠಾವಂತ ಸಾತ್ವಿಕರಾಗಿ ಜೀವಿಸಿದರು. ಅವರಿಗೆ ಖಿಲಾಫತ್‌ನೊಂದಿಗೆ ಅತ್ಯಂತ ನಿಕಟ ಸಂಬಂಧ ಮತ್ತು ಪ್ರೀತಿ ಇತ್ತು. ಅವರು ಎಂ.ಟಿ.ಎ. ನೋಡಲಿಕ್ಕಾಗಿ ತನ್ನ ಮನೆಯಲ್ಲಿ ಡಿಶ್ ಏಂಟಿನ ಇರಿಸಿದ್ದರು. ಹಾಗೆ ತನಗೆ ಮತ್ತು ಕುಟುಂಬಕ್ಕೆ ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿಸಿದ್ದರು. ಅವರು ಚಂದಗಳನ್ನೂ ಇತರ ದೇಣಿಗೆಗಳನ್ನೂ ಧಾರಾಳವಾಗಿ ನೀಡುತ್ತಿದ್ದರು. ಅವರು ಪತ್ನಿ ಮತ್ತು ಮೂವರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ರಕ್ಷಕನಾಗಲಿ. ಪ್ರತಿಯೊಂದು ಕಷ್ಟದಿಂದ ಅವರನ್ನು ರಕ್ಷಿಸಲಿ. ಅಲ್ಲಾಹನು ಖಾಝಿ ಸಾಹಿಬರ ಪದವಿ ಉನ್ನತಗೊಳಿಸುತ್ತಾ ಇರಲಿ – ಆಮೀನ್.

ಇನ್ನೊಂದು ಹಾಝಿರ್ ಜನಾಝ ಆಗಿದೆ. ಮುಹ್‌ತರಮ ಅಮತುಲ್ ಹೈ ಬೇಗಮ್ ಸಾಹಿಬ (ಸೇಠ್ ಮುಹಮ್ಮದ್ ಗೌಸ್ ಸಾಹಿಬರ ಪುತ್ರಿ) ಅವರದಾಗಿದೆ. ಅವರು ನೂರಕ್ಕಿಂತ ಹೆಚ್ಚು ಪ್ರಾಯದಲ್ಲಿ 2018 ಜೂನ್ 23ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅವರು ನಿಷ್ಠೆಯಿಂದ ನಮಾಝ್ ನಿರ್ವಹಿಸುವವರೂ ಸದಾಕಾಲ ಪ್ರಾರ್ಥನೆ ಮಾಡುವವರೂ ಖಿಲಾಫತ್ ಬಗ್ಗೆ ಅನುಸರಣೆಯುಳ್ಳವರೂ ಬಹಳ ನಿಷ್ಠಾವಂತೆಯೂ ಆಗಿದ್ದರು. ಬಹಳ ಸಾತ್ವಿಕ ಮಹಿಳೆಯೂ ಮೂಸಿಯೂ ಆಗಿದ್ದರು. ಅವರಿಗೆ ಇಬ್ಬರು ಪುತ್ರರೂ ಇಬ್ಬರು ಪುತ್ರಿಯರೂ ಅನೇಕ ಮೊಮ್ಮಕ್ಕಳೂ ಇದ್ದಾರೆ. ಅವರು ಜರ್ಮನಿಯಲ್ಲಿರುವ ಮುಹಮ್ಮದ್ ಇದ್ರೀಸ್ ಸಾಹಿಬ್ ಹೈದರಾಬಾದಿಯವರ ಮಾತೆಯಾಗಿದ್ದಾರೆ. ಅವರಿಗೆ ಅಲ್ಲಾಹನು ಉನ್ನತ ಪದವಿ ನೀಡಲಿ. ಅವರ ಸಂತಾನದವರು ಖಿಲಾಫತ್‌ನೊಂದಿಗೆ ಸತ್ಯವಾದ ಸಂಬಂಧ ಸ್ಥಾಪಿಸುವವರಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 29-06-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon